ಪುನರ್ವಸತಿ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯದ ಬಗ್ಗೆ ಬೇಡಿಕೆಗಳು ಬರುತ್ತಿದ್ದು ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಡಿಯ ಕಾರ್ಯಕ್ರಮದಲ್ಲಿ ಆಯಕಟ್ಟು ರಸ್ತೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದ್ದು, 1992–93ನೇ ಸಾಲಿನಲ್ಲಿ 3ಕಿ.ಮೀ. ಉದ್ದದ ಆಯಕಟ್ಟು ರಸ್ತೆ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಜನವರಿ 1993ರ ಅಂತ್ಯದವರೆಗೆ 0.94 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು ಈ ರೀತಿ ಇದೆ:–

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ 3ಕಿ.ಮೀ. ಉದ್ದದ ಆಯಕಟ್ಟು ರಸ್ತೆ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಜನವರಿ 1993ರ ಅಂತ್ಯದವರೆಗೆ 0.94 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು ಈ ರೀತಿ ಇದೆ:–

ಕಾಮಗಾರಿಗಳ ಹೆಸರು	92–93ರ ಕಾರ್ಯಕ್ರಮ (ಲಕ್ಷ ರೂ.)	ಡಿಸೆಂಬರ್ 92ರವರೆಗಿನ ವೆಚ್ಚ (ಲಕ್ಷ ರೂ.)
ಸವದತ್ತಿ ತಾಲ್ಲೂಕು		
1. ಹೂಲಿಯಿಂದ ಚುಳಕಿವರೆಗಿನ ರಸ್ತೆ	9.55	4.98
2. ಆಲದಕಟ್ಟಿಯಲ್ಲಿ ಎರಡು ಕೊಠಡಿ ಪ್ರಾಥಮಿಕ ಶಾಲೆ,	1.60	0.55
ಬೈಲಹೊಂಗಲ ತಾಲ್ಲೂಕು		
3. ನಯಾನಗರದಲ್ಲಿ ವಿವಿದೋದ್ದೇಶ ಕಮ್ಯೂನಿಟಿ ಕಟ್ಟಡ	3.79	3.65
ಆ) ಉದ್ಭವಿಸುವುದಿಲ್ಲ		

ಏತನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ

146 (445) ಶ್ರೀ ಉಮೇಶ್ ವಿ.ಕತ್ತಿ. (ಹುಕ್ಕೇರಿ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಏತ ನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು (ಹುದ್ದೆವಾರು ವಿವರ ನೀಡುವುದು);

ಆ) ಅವುಗಳಲ್ಲಿ ಖಾಯಂ ಆದವರ ಸಂಖ್ಯೆ ಎಷ್ಟು ಹಾಗೂ ಆಗದೇ ಇದ್ದವರ ಸಂಖ್ಯೆ ಎಷ್ಟು;

ಇ) ಅವರುಗಳನ್ನು ಖಾಯಂ ಯಾವಾಗ ಮಾಡಲಾಗುವುದು ಮತ್ತು ಖಾಯಂ ಮಾಡಲು ಇರುವ ತೊಂದರೆಗಳೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 420

ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಯಾರೂ ಖಾಯಂ ಆಗಿರುವುದಿಲ್ಲ. ಕಾವೇರಿ ಜಲಾನಯನ ಏತ ನೀರಾವರಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ 197 ನಿಗಮದ ನೌಕರರನ್ನು ಸಕ್ರಮಗೊಳಿಸಲು ದಿನಾಂಕ 19–2–92ರಂದು ಜರುಗಿದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿರುವ ಬಗ್ಗೆ ಈಗ ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರ ಈ ಬಗ್ಗೆ ಪರಿಶೀಲಿಸುತ್ತಿದೆ.

ಇ) ಖಾಯಂ ಮಾಡುವ ಪ್ರಸ್ತಾವನೆ ಬಗ್ಗೆ ಸರ್ಕಾರ ಇನ್ನು ಪರಿಶೀಲಿಸಿರುವುದಿಲ್ಲ.

ಅನುಬಂಧ

(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 445–ಶ್ರೀ ಉಮೇಶ ವಿ.ಕತ್ತಿ. ವಿಧಾನಸಭಾ ಸದಸ್ಯ)

ಕಾವೇರಿ ಮತ್ತು ಕೃಷ್ಣಾ ಜಲಾನಯನ ಏತನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ವಿವರಗಳು.

ಕ್ರ. ಸಂ.	ಹುದ್ದೆಯ ಪದನಾಮ	ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ			
		ಕೃಷ್ಣಾ ಏ.ನೀ.ನಿ.		ಕಾವೇರಿ ಏ.ನೀ.ನಿ.	
		ಎರವಲು	ನಿಗಮದ ನೌಕರರು	ಎರವಲು	ನಿಗಮದ ನೌಕರರು
1.	ವ್ಯವಸ್ಥಾಪಕ ನಿರ್ದೇಶಕರು	1	–	–	–
2.	ಉಪ ನಿರ್ದೇಶಕರು	1	–	1	–
3.	ಕಾರ್ಯಪಾಲಕ ಇಂಜಿನಿಯರ್	2	–	3	–
4.	ಮುಖ್ಯ ಲೆಕ್ಕಾಧಿಕಾರಿ	1	–	1	–
5.	ಸಹಾಯಕ ಕಾರ್ಯಪಾಲಕ ಇಂಜಿನಿಯರು	5	–	9	–
6.	ಕಾರ್ಯದರ್ಶಿ (ಆಡಳಿತಾಧಿಕಾರಿ)	–	–	–	–
7.	ಆಡಳಿತಾಧಿಕಾರಿ	–	–	–	1
8.	ಸಹಾಯಕ ಇಂಜಿನಿಯರ್	–	52	1	62
9.	ಕಿರಿಯ ಇಂಜಿನಿಯರ್	–	29	–	24
10.	ಸೂಪರಿಂಟೆಂಡೆಂಟ್	1	–	–	–
11.	ಲೆಕ್ಕ ಅಧೀಕ್ಷಕರು	3	–	4	
12.	ಲೆಕ್ಕ ಪರಿಶೋಧಕರು	–	–	1	–
13.	ವ್ಯವಸ್ಥಾಪಕರು	–	–	1	–
14.	ರೇಖ ಚಿತ್ರಾಕಾರರು	–	–	–	3
15.	ಪ್ರಥಮ ದರ್ಜೆ ಸಹಾಯಕರು	6	5+1=6	3	19
16.	ಪ್ರಥಮ ದರ್ಜೆ ಲೆಕ್ಕ ಸಹಾಯಕರು	1	2	–	–
17.	ಪ್ರಥಮ ದರ್ಜೆ ಉಗ್ರಾಣ ಪಾಲಕರು	3	–	–	–
18.	ಪ್ರಥಮ ದರ್ಜೆ ರೆವಿನ್ಯೂ ಸರ್ವೆಯರ್	1	–	–	–
19.	ಪ್ರಥಮ ದರ್ಜೆ ಭೂಮಾಪಕರು	–	–	3	–
20.	ಶೀಘ್ರಲಿಪಿಗಾರರು	–	1	–	1
21.	ದ್ವಿತೀಯ ದರ್ಜೆ ಸಹಾಯಕರು	–	14	–	28
22.	ದ್ವಿತೀಯ ದರ್ಜೆ ಲೆಕ್ಕಸಹಾಯಕರು	2	2	–	–

23. ಬೆರಳಚ್ಚುಗಾರರು	–	15	–	13
24. ಟ್ರೇಸರ್	–	3	–	–
25. ಬ್ಲೂಪ್ರಿಂಟರ್	–	3	–	–
26. ಅನುಚರರು (ಅಟೆಂಡರ್)	–	1	–	1
27. ನಾಲ್ಕನೇ ದರ್ಜೆ ನೌಕರರು (ಪೀವನ್)	1	15	–	34
28. ಕಾವಲುಗಾರರು (ವಾಚ್‌ಮನ್)	1	11	–	–
29. ವಾಹನ ಚಾಲಕರು	1	12	–	11
ಒಟ್ಟು	30	166	27	197

ಪ್ರತಿವಿಧಾನ ಸಭಾಕ್ಷೇತ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಒದಗಿಸುವ ತೀರ್ಮಾನ

151 (452) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆ ಮುಖಾಂತರ 40 ಲಕ್ಷ ರೂಪಾಯಿ ಒದಗಿಸಲು (1992-93)ರಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೆ;

ಆ) ಹಾಗಿದ್ದಲ್ಲಿ ಅದಕ್ಕೆ ಹಣ ಒದಗಿಸಲಾಗಿದೆಯೆ;

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಪ್ರಸ್ತಾಪವು ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಅನುದಾನ ನಿಗದಿಪಡಿಸುವ ವಿಷಯವು ಪರಿಶೀಲನೆಯಲ್ಲಿದೆ.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತೀವೃಷ್ಟಿಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಹಣ

152 (544) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತ ಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಅತೀವೃಷ್ಟಿಯಿಂದ ಯಾವ ಯಾವ ಊರಿನ ಕೂಡ ರಸ್ತೆಗಳು ಕೊಚ್ಚಿ ಹೋಗಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ (ವಿವರ ಕೊಡುವುದು);

ಆ) ಈ ರಸ್ತೆಗಳ ರಿಪೇರಿಗೆ ಅಂದಾಜುಗಳು ತಯಾರಾಗಿದೆಯೆ (ವಿವರ ಕೊಡುವುದು);

ಇ) ಈ ಅಂದಾಜುಗಳ ಒಟ್ಟು ಮೊಬಲಗೆಷ್ಟು (ವಿವರ ಕೊಡುವುದು);